ಅಧ್ಯಕ್ಷರು : ಒಂದು ದಿವಸ ಚುನಾವಣೆ. ನೀವು ಮುಖ್ಯ ಸಚೇತಕರಾಗಿದ್ದವರು ಈ ರೀತಿ ನಮಗೆ ತಿಳಿಸದೆ ಗೈರು ಹಾಜರಾದರೆ ಹೇಗೆ?

ಡಾ|| ಎ.ಬಿ. ಮಲಕರೆಡ್ಡಿ : ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒಂದು ಸಮುದಾಯ ಆಸ್ಪತ್ರೆ ಕೊಡುತ್ತೇವೆ, ಅದಕ್ಕೆ ಒಂದು ಲಕ್ಷ ಜನಸಂಖ್ಯೆ ಇರಬೇಕೆಂದೇನೂ ಇಲ್ಲ ಎಂದು ನಾನು ಆರೋಗ್ಯ ಸಚಿವನಾಗಿದ್ದಾಗ ಆದೇಶ ಮಾಡಿದ್ದೆ. ಹೊಸ ಸರ್ಕಾರ ಬಂದಮೇಲೆ ಅದನ್ನು ವಿತ್‌ಡ್ರಾ ಮಾಡಿದರು. ಅದು ವೈಜ್ಞಾನಿಕವಾಗಿದೆ ಎಂದು ನಾನು ಭಾವಿಸುತ್ತೇನೆ. ದಯಮಾಡಿ ಅದನ್ನು ರೆಸ್ಟೋರ್ ಮಾಡಬೇಕು.

ಡಾ|| ಎಂ. ಶಂಕರ್ ನಾಯಕ್ : ಮಾನ್ಯ ಸದಸ್ಯರು ಹೇಳತಕ್ಕದ್ದನ್ನು ಪರಿಶೀಲಿಸುತ್ತೇವೆ. ನಮ್ಮ ಹತ್ತಿರ ಈಗ ಮಾಹಿತಿ ಇಲ್ಲ. ನಮ್ಮ ಹತ್ತಿರ ಇರುವ ಮಾಹಿತಿ ಪ್ರಕಾರ ಒಂದು ಲಕ್ಷ ಜನಸಂಖ್ಯೆ ಇಲ್ಲದಿರುವುದರಿಂದ ರದ್ದು ಮಾಡಿದ್ದೇವೆಂದು ಹೇಳಿದ್ದಾರೆ. ಸಂಬಂಧಪಟ್ಟ ಸಚಿವರು ಇವತ್ತು ಬಂದಿಲ್ಲ. ನಾನು ಇದನ್ನು ಅವರ ಗಮನಕ್ಕೆ ತರುತ್ತೇನೆ ಮತ್ತು ಸಾಧ್ಯವಾಗುವುದಾದರೆ ಅದನ್ನು ಮಾಡುತ್ತಾರೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಸದಲಗಾದಲ್ಲಿ ಸಮುದಾಯ ಆಸ್ಪತ್ರೆಯನ್ನು ರದ್ದು ಮಾಡಿ ಅದೇ ಬೆಳಗಾಂ ಜಿಲ್ಲೆಯಲ್ಲಿ ಇನ್ನೊಂದು ಕಡೆ ಮಂಜೂರ್ಮಾಡಿದ್ದಾರೆ, ಅಲ್ಲಿಯೂ ಕೂಡ ಒಂದು ಲಕ್ಷ ಜನಸಂಖ್ಯೆ ಇಲ್ಲ. ಹಾಗಾದರೆ ನಮಗೆ ಅನ್ಯಾಯ ಮಾಡಿದಂತಾಗುತ್ತದೆ.

ಅಧ್ಯಕ್ಷರು : ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ತಾವು ಅವರ ಗಮನಕ್ಕೆ ತನ್ನಿ.

ರಾಜ್ಯದಲ್ಲಿ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸುವುದು.

340 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವ ಸಂಖ್ಯೆ ಎಷ್ಟು? ಇವರನ್ನು ಖಾಯಂ ಮಾಡುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು):

ಅ) 1997-98ನೇ ಸಾಲಿನಲ್ಲಿ ಅರೆಕಾಲಿಕ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲ.. 1994-95ನೇ ಶೈಕ್ಷಣಿಕ ವರ್ಷ ಮತ್ತು ಅದಕ್ಕೂ ಮುಂಚೆ ಸೇವೆಯಲ್ಲಿದ್ದ ಅರೆಕಾಲಿಕ ಉಪನ್ಯಾಸಕರನ್ನು ಸೇವಾ ಸಕ್ರಮಗೊಳಿಸಲು ಈ ಮೊದಲು ದಿನಾಂಕ 22-1-97 ರಂದು ಸರ್ಕಾರ ರಚಿಸಿದ್ದ ನಿಯಮಾವಳಿಗಳನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ 15-12-97 ರಂದು ಅನೂರ್ಜಿತಗೊಳಿಸಿರುತ್ತದೆ. ಆದಾಗ್ಯೂ ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು ಅದರ ತೀರ್ಮಾನಕ್ಕಾಗಿ ಕಾಯಲಾಗಿದೆ.

ಶ್ರೀ ಡಿ.ವಿ. ಸದಾನಂದ ಗೌಡ : ಉತ್ತರ ತುಂಬಾ ಟೆಕ್ನಿಕಲ್ ಆಗಿದೆ. ನಾನು ಪ್ರಶ್ನೆ ಕೇಳಿದ್ದುದು ರಾಜ್ಯದಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವ ಉಪನ್ಯಾಸಕರ ಸಂಖ್ಯೆ ಎಷ್ಟು

ಎಂದು. ಸರ್ಕಾರ ಒಪ್ಪಿಕೊಂಡಿದೆ, 1994-95ರವರೆಗೆ ಅರೆಕಾಲಿಕ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು ಎಂದು; ಆದರೆ ಅವರ ಸಂಖ್ಯೆ ಎಷ್ಟು ಎಂದು ಕೊಡಲಿಲ್ಲ. ಏಕೆಂದರೆ 1997-98ಕ್ಕೆ ಕೆಲಸ ಮಾಡಲಿಲ್ಲವೆಂದು ಹೇಳಿದ್ದಾರೆ. ಕಳೆದ ಒಂದು ವರ್ಷದ ಇತಿಹಾಸದಲ್ಲಿ ಬಹುಶಃ ಇಡೀ ರಾಜ್ಯದಲ್ಲಿ ಅರೆಕಾಲಿಕ ಉಪನ್ಯಾಸಕರನ್ನು ಅಲ್ಲಿ ಕೆಲಸ ಮಾಡುವುದಕ್ಕೆ ಬಿಡದ ಕಾರಣ ಇಡೀ ರಾಜ್ಯದ ಯಾವುದೇ ಕಾಲೇಜುಗಳಲ್ಲಿ ಕಳೆದ ವರ್ಷ ಯಾವುದೇ ಪಾಠ ಮಾಡಲಿಕ್ಕೆ ಆಗಿಲ್ಲ. ನನ್ನ ಪ್ರಶ್ನೆ, 1994-95ರವರೆಗೆ ಕೆಲಸ ಮಾಡಿದವರನ್ನು ಸಕ್ರಮ ಮಾಡುವುದಕ್ಕೆ ನಾವು ಆಜ್ಞೆ ಮಾಡಿದ್ದೇವೆ. ಆದರೆ ಅದು ಕೋರ್ಟಿನಲ್ಲಿ ಪೆಂಡಿಂಗ್ ಇದೆ ಎಂದು ಹೇಳಿದ್ದೀರಿ. ಎರಡನೆಯ ಇನ್ನೊಂದು ದೊಡ್ಡ ಸಂಗತಿ ತಾವು ಏನು ಮಾಡಿದ್ದೀರೆಂದರೆ, ಹಿಂದೆ ಒಂದು ಫುಲ್ ಟೈಂ ಲೆಕ್ಚರರ್‌ಗೆ ಎರಡು ಪಾರ್ಟ್ ಟೈಂ ಲೆಕ್ಚರರ್ ಮಾಡಬಹುದೆಂದು ಆದೇಶ ಮಾಡಿದಿರಿ. ಅದನ್ನು ಮಾಡಿ ಈಗ ಪಾರ್ಟ್ ಟೈಂ ಲೆಕ್ಚರರ್ ಇಲ್ಲ. ಅನಂತರ ಏನು ಮಾಡಿದಿರಿ? ರಿಟೈರ್ಡ್ ಪ್ರೊಫೆಸರ್‌ಗಳನ್ನು ಪಾರ್ಟ್ ಟೈಂ ಲೆಕ್ಚರರ್ ಬದಲಿಗೆ ನೀವು ಅಲ್ಲಿ ಸೇರಿಸಿಕೊಳ್ಳಬಹುದೆಂದು ಮಾಡಿದಿರಿ. ಎಷ್ಟು ಜನ ರಿಟೈರ್ಡ್ ಪಾರ್ಟ್ ಟೈಂ ಪ್ರೊಫೆಸರ್‌ಗಳನ್ನು ನೀವು ಅಧಿಕೃತವಾಗಿ ಬೇರೆ ಬೇರೆ ಶಾಲಾ ಕಾಲೇಜುಗಳಲ್ಲಿ ಉಪನ್ಯಾಸಕರನ್ನಾಗಿ ನೇಮಿಸಿದಿರಿ? ಒಟ್ಟು ಎಷ್ಟು ಜನ ರಿಟೈರ್ಡ್ ಪ್ರೊಫೆಸರ್‌ಗಳು ಈ ಕೆಲಸ ಮಾಡಿದ್ದಾರೆಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಲೆಕ್ಚರರ್ಸ್‌ಗಳ ಕೊರತೆ ಇರುವುದನ್ನು ಸರ್ಕಾರ ಗಮನಿಸಿದೆ. 1997-98ನೇ ಸಾಲಿನಲ್ಲಿ ಯಾರೂ ಅರೆಕಾಲಿಕ ಲೆಕ್ಚರರ್ಸ್‌ಗಳು ಇಲ್ಲವೆಂದು ತಿಳಿಸಿದ್ದೇನೆ. ಹಿಂದೆ ಇದ್ದರು. ಅವರ ಹಿತರಕ್ಷಣೆ ಮತ್ತು ಲೆಕ್ಚರರ್ಸ್‌ಗಳ ಸಂಖ್ಯೆ ಜಾಸ್ತಿಯಾಗಬೇಕು, ಕಾಲೇಜುಗಳಲ್ಲಿ ಲೆಕ್ಚರರ್ಸ್‌ಗಳು ಇಲ್ಲವೆಂದು ತಿಳಿದುಕೊಂಡು ಮಂಜೂರು ಮಾಡುವ ಸ್ಟೇಜ್‌ಗೆ ನಾವು ಹೋಗಿದ್ದೇವೆ. ಅದು ತೀರ್ಮಾನವಾಗಿತ್ತು. ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿ ಯಾರ್ಯಾರು 1994-95ರ ಹಿಂದೆ ಯಾರಿದ್ದರು ಅವರನ್ನು ಕನ್‌ಫರ್ಮ್ ಮಾಡಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಆಮೇಲೆ ಕೆಎಟಿಯವರು ಅದಕ್ಕೆ ಸ್ಟೇ ಕೊಟ್ಟರು. ನಮಗೆ ಬಹಳ ಅನಾನುಕೂಲವಾಗುತ್ತದೆಂದು ಹೇಳಿದಾಗ ನಾವು ಸುಪ್ರೀಂಕೋರ್ಟ್‌ಗೆ ಸಹ ಅವರ ಬಗ್ಗೆ ಹೋಗಿದ್ದೇವೆ. ಕೆಎಟಿಯವರು ಏನು ಸ್ಟೇ ಕೊಟ್ಟಿದ್ದಾರೆ ಅದು ಸರಿಯಾಗುವುದಿಲ್ಲವೆಂದು ಕೋರ್ಟ್‌ಗೆ ಹೋಗಿದ್ದೇವೆ. ಅವರನ್ನು ತೆಗೆದುಕೊಳ್ಳಬೇಕಾಗುತ್ತದೆ ಲೆಕ್ಚರರ್‌ಗಳ ಸಂಖ್ಯೆ ಬಹಳ ಕಡಿಮೆಯಿದೆ. ಪ್ರತಿಯೊಂದು ಕಾಲೇಜಿನಲ್ಲೂ ಲೆಕ್ಚರರ್‌ಗಳ ಕೊರತೆಯಿದೆ. ಇದು ಕೆಎಟಿಯಲ್ಲಿ ಪೆಂಡಿಂಗ್ ಇದೆ. ಅರೆಕಾಲಿಕ ಉಪನ್ಯಾಸಕರ ಬಗ್ಗೆ ಅದಿನ್ನು ಪೆಂಡಿಂಗ್‌ನಲ್ಲಿರುವುದರಿಂದ ಅದು ತೀರ್ಮಾನವಾಗದೆ ನಾವು ಯಾರನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಮಧ್ಯೆ ನಾವೇನು ಮಾಡಿದ್ದೇವೆಂದರೆ, ತಾವು ಹೇಳಿದ ಹಾಗೆ ಗೆಸ್ಟ್ ಲೆಕ್ಚರರ್ಸ್ ಅಪಾಯಿಂಟ್ ಮಾಡಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತದೆಂದು ಒಂದು ಗಂಟೆಗೆ ನೂರು ರೂಪಾಯಿಗಳಂತೆ ಎಲ್ಲೆಲ್ಲಿ ಅವಶ್ಯಕತೆಯಿದೆ ಅಲ್ಲೆಲ್ಲಾ ಗೆಸ್ಟ್ ಲೆಕ್ಚರರ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸರ್ಕಾರದಿಂದ ಆದೇಶ ಕೊಟ್ಟಿದ್ದೇವೆ. ಕೆಲವು ಕಡೆ ತೆಗೆದುಕೊಂಡಿದ್ದಾರೆ. ಇನ್ನು ಕೆಲವು ಕಡೆ ಸಿಗುತ್ತಾ ಇಲ್ಲ. ಹಿಂದೆ ಮಾನ್ಯ ಸದಸ್ಯರೊಬ್ಬರು ಈ ಬಗ್ಗೆ ಪ್ರಶ್ನೆ ಕೇಳಿದಾಗ ಇದೇ ಉತ್ತರ ಹೇಳಿದ್ದೇನೆ. ಕೋರ್ಟ್‌ನಲ್ಲಿ ಈ ಬಗ್ಗೆ ತೀರ್ಮಾನವಾದರೆ

ಅವರುಗಳನ್ನೆಲ್ಲಾ ತೆಗೆದುಕೊಳ್ಳುವುದಕ್ಕೆ ಯಾವುದೇ ರೀತಿಯಲ್ಲಿ ಹಿಂದೇಟು ಹಾಕುವುದಿಲ್ಲ. ಈಗ ತೊಂದರೆಯಿದೆ ಅದು ನಮಗೆ ಗೊತ್ತಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ಕೆಎಟಿಯಲ್ಲಿ ಏನು ಹೇಳಿದರು ಪಾರ್ಟ್‌ಟೈಮ್ ಲೆಕ್ಚರರ್ಸ್‌ಗಳನ್ನು ಆಪಾಯಿಂಟ್ ಮಾಡುವುದು ಬ್ಯಾಕ್‌ಡೋರ್ ಎಂಟ್ರಿಯಾಗುತ್ತದೆ ಎಂದು ಏಕೆ ಬ್ಯಾಕ್ ಡೋರ್ ಎಂಟ್ರಿಯಾಯಿತು? ಫ್ರಂಟ್‌ಡೋರ್ ಎಂಟ್ರಿಗೆ ತಾವು ಅವಕಾಶ ಕೊಡದ ಕಾರಣ ಬ್ಯಾಕ್‌ಡೋರ್ ಎಂಟ್ರಿ ಅವಕಾಶವಾಯಿತು. ಆದರೂ ಕೂಡ 1994-95ರವರೆಗೆ ಯಾರ್ಯಾರು ಕೆಲಸ ಮಾಡುತ್ತಿದ್ದರು ಅವರ ಸಂಖ್ಯೆ ಎಷ್ಟು? ಅವರುಗಳನ್ನು ಖಾಯಂ ಮಾಡುವುದಕ್ಕೆ ಹೈಕೋರ್ಟ್‌ನಲ್ಲಿ ಪುನಃ ರಿಟ್ ಹಾಕಿದ್ದೇವೆಂದರೆ, ಬೇರೆಲ್ಲಾ ಕಾನೂನುಗಳನ್ನು ನೀವೇನು ಮಾಡುತ್ತೀರಿ? ಒಂದು ಕೋರ್ಟ್‌ನಲ್ಲಿ ಯಾವುದಾದರೂ ರಿಜೆಕ್ಟ್ ಆದರೆ ಅದನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತೊಂದು ಮಾಡಲು ಕ್ರಮ ತೆಗೆದುಕೊಳ್ಳುತ್ತೀರಿ. ಉದಾಹರಣೆಗೆ ಅರಮನೆ ಭೂಮಿ ಬಗ್ಗೆ ಸುಪ್ರೀಂಕೋರ್ಟ್ ಆದೇಶ ಆದಮೇಲೆ ನೀವೇನು ಮಾಡಿದಿರಿ? ಹೊಸ ಕಾನೂನು ತರುತ್ತೇವೆ, ಇದೇ ಸದನದಲ್ಲಿ ಅದನ್ನು ಮಂಡನೆ ಮಾಡುತ್ತೇವೆ ಅದನ್ನು ನಮ್ಮ ವಶಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಬಹುಶಃ ಇದು ಇಡೀ ರಾಜ್ಯದ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆ. ಇದರ ಬಗ್ಗೆ ವಿಶೇಷವಾದ ಕಾನೂನು ಮಾಡಲಿಕ್ಕೆ ಸರ್ಕಾರ ಏಕೆ ಹಿಂದೇಟು ಹಾಕುತ್ತಿದೆ? ತಾವು ಏಕೆ ಆ ಕೆಲಸ ಮಾಡಬಾರದು? ಈ ಕೆಲಸವನ್ನು ಮಾಡುವ ಉದ್ದೇಶ ರಾಜ್ಯಸರ್ಕಾರಕ್ಕೆ ಇದೆಯೇ? ಇದ್ದರೆ ಯಾವಾಗ ಮಾಡಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಅರೆಕಾಲಿಕ ಉಪನ್ಯಾಸಕರುಗಳ ಬಗ್ಗೆ ನಾವು ಕೂಡಲೇ ಏನೂ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅವರುಗಳೆಲ್ಲಾ ಕೋರ್ಟ್‌ಗೆ ಹೋಗಿರುವುದರಿಂದ, ಕೋರ್ಟ್‌ನಿಂದ ನಮಗೆ ತೀರ್ಮಾನ ಬರಬೇಕು. ಉಪನ್ಯಾಸಕರುಗಳನ್ನು ಕಾಲೇಜುಗಳಿಗೆ ಯಾವರೀತಿ ಒದಗಿಸಬೇಕೆನ್ನುವ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆ.

ಶ್ರೀ ಜೆ.ಟಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಯಸ್ಕರ ಶಿಕ್ಷಣ ಸಚಿವರನ್ನು ಮಾನ್ಯ ಡಿ.ಆರ್. ಪಾಟೀಲ್‌ರವರ ಪರವಾಗಿ ಅವರ ಹೆಸರಿನಲ್ಲಿರತಕ್ಕ ಪ್ರಶ್ನೆಯನ್ನು ಕೇಳಲು ತಾವು ಅವಕಾಶ ಕೊಡಬೇಕು.

ರಾಜ್ಯದ ಸಾಕ್ಷರತಾ ಪ್ರಮಾಣ

341- ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ವಯಸ್ಕರ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ವೃತ್ತಿ ಮತ್ತು ಸರ್ಕಾರಿ ಮುದ್ರಣಾಲಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ರ ಜನಗಣತಿಯಂತೆ ರಾಜ್ಯದ ಸಾಕ್ಷರತಾ ಪ್ರಮಾಣ ಎಷ್ಟು?

ಆ) 1997ರ ಅಂತ್ಯದಲ್ಲಿ ಸಾಧಿಸಲಾಗಿರುವ ಸಾಕ್ಷರತಾ ಪ್ರಮಾಣ ಎಷ್ಟು?